

### ವಾಹನ ದಟ್ಟಣೆಯ ಕುಖ್ಯಾತಿ

ಭಾರತದ ಸಿಲಿಕಾನ್ ವ್ಯಾಲಿ, ಉದ್ಯಾನನಗರಿ ಎನ್ನುವ ಬಣ್ಣದ ಗರಿಗಳನ್ನು ಸಿಕ್ಕಿಸಿಕೊಂಡಿರುವ ಬೆಂಗಳೂರಿಗೆ, ಆಗ್ನೇಯ ಏಷ್ಯಾದಲ್ಲಿ ಅತಿ ಹೆಚ್ಚು ವಾಹನ ದಟ್ಟಣೆ ಹೊಂದಿರುವ ಎರಡನೇ ನಗರ ಎನ್ನುವ ಇನ್ನೊಂದು ವಿಶೇಷಣವೂ ಅಂಟಿಕೊಂಡಿದೆ. ವಾಹನಸಂದಣಿ ಹೆಚ್ಚು ಎಂದರೆ ಮಾಲಿನ್ಯ ಹೆಚ್ಚು ಹಾಗೂ ಟ್ರಾಫಿಕ್ ಸಿಕ್ಕು ಹೆಚ್ಚು ಎನ್ನುವುದನ್ನು ಬಿಡಿಸಿ ಹೇಳಬೇಕಾಗಿಲ್ಲ.

ಬೆಂಗಳೂರಷ್ಟೇ ಅಲ್ಲ – ಭಾರತದ ದೆಹಲಿ, ಚೀನಾದ ಹಾಂಕಾಂಗ್, ವಿಯೆಟ್ನಾಂನ ಹನೋಯ್ ಹಾಗೂ ಫಿಲಿಪ್ಪೀನ್ಸ್‌ನ ಮನಿಲಾ ನಗರಗಳು ಕೂಡ ಆಗ್ನೇಯ ಏಷ್ಯಾದಲ್ಲಿ ಟ್ರಾಫಿಕ್ ಜಾಮ್ ಕುಖ್ಯಾತಿಗೆ ಪ್ರಸಿದ್ಧವಾಗಿವೆ. ಏಷ್ಯಾದ ದೇಶಗಳ ಮಾತಿರಲಿ – ಅಭಿವೃದ್ಧಿಯ ಹರಿಕಾರರೆಂದು ಬೀಗುವ ಯುರೋಪಿನ ನಗರಗಳೂ ಟ್ರಾಫಿಕ್ ಜಾಮ್ ಕುಖ್ಯಾತಿಯಿಂದ ಪಾರಾಗಿಲ್ಲ. ವಿಶ್ವದ ಸುಸಂಸ್ಕೃತ ನಗರಗಳ ಪಟ್ಟಿಯಲ್ಲಿ ಮುಂಚೂಣಿಯಲ್ಲಿ ನಿಲ್ಲಲು ಹವಣಿಸುವ ಪ್ಯಾರಿಸ್ ವಾಹನ ದಟ್ಟಣೆಯ ಕರಾಳಮುಖವನ್ನೂ ಹೊಂದಿದೆ. ಲಂಡನ್ ಮತ್ತು ಮಾಸ್ಕೋಗಳ ನಂತರ ಯುರೋಪ್‌ನಲ್ಲಿ ಅತಿ ಹೆಚ್ಚು ವಾಹನ ಸಂದಣಿ ಪ್ಯಾರಿಸ್‌ನಲ್ಲಿದೆ ಎಂದು 'ಟೆಲಿಗ್ರಾಫ್'ನ ವರದಿಯೊಂದು ಹೇಳುತ್ತದೆ. ಪ್ಯಾರಿಸ್‌ನಲ್ಲಿ ವರ್ಷಕ್ಕೆ ಸರಾಸರಿ 65 ತಾಸುಗಳ ಕಾಲ ವಾಹನ ಸವಾರರು ಟ್ರಾಫಿಕ್‌ಸುಳಿಯಲ್ಲಿದ್ದರೆ, ಈ ಪ್ರಮಾಣ ಲಂಡನ್‌ನಲ್ಲಿ 73 ತಾಸುಗಳಷ್ಟಿದೆ. ಯುರೋಪ್‌ನ ಮ್ಯಾಂಚೆಸ್ಟರ್, ಮ್ಯೂನಿಚ್, ಲಂಡನ್, ಜ್ಯೂರಿಚ್, ಓಸ್ಲೋ, ಹ್ಯಾಂಬರ್ಗ್, ಬರ್ಲಿನ್ – ಹೀಗೆ ಯಾವ ನಗರಕ್ಕೆ ಹೋದರೂ ವಾಹನಗಳ ಚಕ್ರವ್ಯೂಹದಿಂದ ತಪ್ಪಿಸಿಕೊಳ್ಳುವಂತಿಲ್ಲ.

ವಿದೇಶಗಳ ಮಾತಿರಲಿ, ಟ್ರಾಫಿಕ್ ಜಾಮ್ ನಿಯಂತ್ರಣಕ್ಕೆ ನಮ್ಮಲ್ಲಿ ಯಾವ ರೀತಿಯ ಯೋಜನೆಗಳಿವೆ ಎಂದು ನೋಡಿದರೆ ನಿರಾಶೆಯಾಗುತ್ತದೆ. ಸರ್ಕಾರವೇನೋ ಪ್ರತಿ ವರ್ಷವೂ ಕೋಟ್ಯಂತರ ರೂಪಾಯಿಗಳನ್ನು ರಸ್ತೆಗಳ ಅಭಿವೃದ್ಧಿಗೆ ಸುರಿಯುತ್ತದೆ. ಆದರೆ, ಕರ್ನಾಟಕದ ಯಾವ ನಗರಗಳ ರಸ್ತೆಗಳೂ ಗುಂಡಿಮುಕ್ತವಾಗಿಲ್ಲ. ಮುಖ್ಯರಸ್ತೆಗಳು ಸ್ವಲ್ಪಮಟ್ಟಿಗೆ ಕಳೆಕಳೆಯಾಗಿದ್ದರೂ ಸಂಪರ್ಕ ರಸ್ತೆಗಳು ಸದಾ ಅನಾರೋಗ್ಯಪೀಡಿತವಾಗಿರುತ್ತವೆ. ಇನ್ನು ಸಾರ್ವಜನಿಕ ಸಾರಿಗೆ ನಿರೀಕ್ಷಿತ ಮಟ್ಟದಲ್ಲಿ ಸುಧಾರಣೆಯಾಗಿಲ್ಲ. ನಗರಸಾರಿಗೆ ಬಸ್ಸುಗಳು ಟ್ರಾಫಿಕ್ ಜಾಮ್ ಪರಿಣಾಮದಿಂದಾಗಿ ಸಮಯದ ಶಿಸ್ತಿಗೆ ಒಳಪಡುವುದು ಸಾಧ್ಯವಾಗಿಲ್ಲ. ಬೆಂಗಳೂರಿನಲ್ಲಿನ ಮೆಟ್ರೋ ರೈಲು ಸಾರಿಗೆ ಟ್ರಾಫಿಕ್ ಸಮಸ್ಯೆಗೆ ಒಂದು ಪರಿಣಾಮಕಾರಿ ಉತ್ತರವಾದರೂ, ನಗರದ ಬೆಳವಣಿಗೆಯನ್ನು

## ಕಥೆಗೆ ಹಸಿರುದೀಪ!

ಟ್ರಾಫಿಕ್ ಜಾಮ್‌ನಲ್ಲಿ ಸಿಲುಕಿಕೊಳ್ಳುವ ಸಮಯವನ್ನು ಸೃಜನಶೀಲವಾಗಿ ಬಳಸಿಕೊಳ್ಳುವವರೂ ಇದ್ದಾರೆ. ಕೈಮೀರಿದ ಸಂಗತಿಗಳಲ್ಲೂ ನಮ್ಮ ಅನುಕೂಲಕ್ಕೆ ಬರುವಂತಹದ್ದೇನಾದರೂ ಇದೆಯೇ ಎಂದು ಹುಡುಕುವ ಧನಾತ್ಮಕ ಮನೋಭಾವವಿದು. ಈ ಸಾಲಿಗೆ ಸೇರಿದವರು ಕಥೆಗಾರ ವಸುಧೇಂದ್ರ. ಟ್ರಾಫಿಕ್ ಜಾಮ್ ಅವರ ಸಾಹಿತ್ಯ ಕೃಷಿಗೆ ನೆರವಾಗಿದೆಯಂತೆ. ಹಸಿರುದೀಪಕ್ಕೆ ಕಾಯುವ ಸಮಯದಲ್ಲಿ ಕಥೆಯ ಬಗ್ಗೆ ಯೋಚಿಸುವುದು ಅಥವಾ ಲ್ಯಾಪ್‌ಟಾಪ್‌ನಲ್ಲಿ ಕಥೆಯನ್ನು ಮೂಡಿಸುವುದೂ ಸಾಧ್ಯ ಎನ್ನುವ ಅನುಭವ ಅವರದು. ಆ ಕಾರಣದಿಂದಲೇ ಅವರು ತಮ್ಮ ಕಥಾಸಂಕಲನವೊಂದನ್ನು ಟ್ರಾಫಿಕ್ ಜಾಮ್‌ಗಳಿಗೂ ಹಾಗೂ ತಮ್ಮ ವಾಹನ ಚಾಲಕನಿಗೂ ಅರ್ಪಿಸಿದ್ದಾರೆ. ಎಂಥ ವಿಶಿಷ್ಟ ಅರ್ಪಣೆಯಲ್ಲವೇ?

ವಸುಧೇಂದ್ರ ಅವರಿಗೇನೋ ಟ್ರಾಫಿಕ್ ಜಾಮ್‌ನಲ್ಲಿ ಕಥೆಗಳು ಸಿಕ್ಕಿರಬಹುದು. ಇನ್ನೂ ಕೆಲವರಿಗೆ ಬದುಕೇ ಸಿಗುವುದಿದೆ. ಟ್ರಾಫಿಕ್ ಜಾಮ್‌ನ ಕೆಲವು ನಿಮಿಷಗಳಲ್ಲಿ ವ್ಯಾಪಾರ ಮಾಡುವವರಿದ್ದಾರೆ. ಪೆನ್ನು, ಪೇಪರ್, ಆಟಿಕೆ, ಹಣ್ಣು – ಹೀಗೆ ಯಾವಯಾವುದೋ ವಸ್ತುಗಳನ್ನು ವಾಹನ ಸವಾರರಿಗೆ ಮಾರಲು ಪ್ರಯತ್ನಿಸುವವರು ಟ್ರಾಫಿಕ್ ಜಾಮ್ ಸಂಭವಿಸುವ ಬಹುತೇಕ ವೃತ್ತಗಳಲ್ಲಿ ಕಾಣಸಿಗುತ್ತಾರೆ. ಹೆದ್ದಾರಿಗಳ ಟೋಲ್ ಸಂಗ್ರಹ ಕೇಂದ್ರಗಳಲ್ಲಂತೂ ಹಣ್ಣು, ಕುರುಕಲು, ನೀರು ಮಾರುವ ಹುಡುಗರು ಸಾಕಷ್ಟು ಮಂದಿ ಕಾಣಸಿಗುತ್ತಾರೆ. ಹಾಗಾಗಿ ಪ್ರಾಣ ಹಿಂಡುವ ಟ್ರಾಫಿಕ್ ಜಾಮ್‌ಗೆ, ಸಣ್ಣ ಪ್ರಮಾಣದಲ್ಲಿ ಬದುಕನ್ನು ಕಟ್ಟಿಕೊಡುವ ಮುಖವೂ ಇದೆ.


